ಸಾಕ್ಷಿಯ ಹೆಸರುಃ ಎಸ್.ಆರ್. ಅಶ್ವಥ್

ದಿನಾಂಕಃ **27-10-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ.ಡಿ.ಎಂ. ವಕೀಲರಿಂದಃ

ಇದೇ ನ್ಯಾಯಾಲಯದಲ್ಲಿ ಸಿ.ಎಸ್. ರವಿರವರ ಮೇಲೆ ಅಸಲು ದಾವಾ ಸಂಖ್ಯೆ 55/2018 ನ್ನು ದಾಖಲು ಮಾಡಿದ ವಾದಿ ಎಸ್.ಆರ್.ಸಣ್ಣಪ್ಪಗೌಡ ನನಗೆ ತಮ್ಮನಾಗಬೇಕು. ನಾನು ಮತ್ತು ನನ್ನ ತಮ್ಮ ಒಬ್ಬರಿಗೊಬ್ಬರು ಬಾಂಧವ್ಯದಿಂದ ಇದ್ದೇವೆ. ನಾನು ಮತ್ತು ನನ್ನ ತಮ್ಮ ಬೇರೆ ಬೇರೆ ವಾಸವಾಗಿದ್ದೇವೆ. ನಾವಿಬ್ಬರೂ ಬಾಂಧವ್ಯದಿಂದ ಇರುವುದರಿಂದ, ಆಸ್ತಿ ವಿಚಾರದಲ್ಲಿ ಅಂದರೆ ಕೊಡು ಕೊಳ್ಳುವಾಗ ಒಬ್ಬರಿಗೊಬ್ಬರು ವಿಚಾರಿಸಿ ಮಾಡುತ್ತೇವೆ ಎಂದರೆ ಸರಿ. ನಿಪಿ-01 ನ್ನು ನನಗೆ ಬರೆದುಕೊಟ್ಟ ಸೌಭಾಗ್ಯಮ್ಮ ಇದೇ ಕೆ.ಆರ್.ನಗರದವರು. ಸೌಭಾಗ್ಯಮ್ಮರವರ ಯಜಮಾನರಾದ ಕೆ.ಕೆ.ಜವರೇಗೌಡರು ವಕೀಲರಾಗಿದ್ದರು. ಅವರು ಈಗ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸೌಭಾಗ್ಯಮ್ಮರವರು ಕೆ.ಆರ್.ನಗರ ತಾಲ್ಲೂಕು ಹೊಸಅಗ್ರಹಾರ ಹೋಬಳಿ, ಕಾರಗಳ್ಳಿಕೊಪ್ಪಲು ಗ್ರಾಮದವರು ಎಂದರೆ ಸರಿ. ಸದರಿ ಸೌಭಾಗ್ಯಮ್ಮ ಮತ್ತು ಕೆ.ಕೆ.ಜವರೇಗೌಡರು ನಿಪಿ-01 ರಲ್ಲಿ ನಮೂದಿಸಿದ ವಿಳಾಸವಾದ 1 ನೇ ಕ್ರಾಸ್ ಅರಕನಾಥ ರಸ್ತೆ, ಕೆ.ಆರ್.ನಗರದಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-01 ರಲ್ಲಿ ಅವರ ಸಂಪೂರ್ಣ ವಿಳಾಸ ಅಂದರೆ ಮನೆ ನಂಬರ್ ಇಲ್ಲ ಎಂದರೆ ಸರಿ. ನಿಪಿ-01 ರಲ್ಲಿ ಸದರಿ ಸೌಭಾಗ್ಯಮ್ಮರವರಿಗೆ ದಾವಾಸ್ವತ್ತು ಹೇಗೆ ಬಂತು ಎಂದು ನಮೂದಿಸಿಲ್ಲ ಎಂದರೆ ಸರಿ.

2) ಸರ್ವೆ ನಂ.72 ಸೌದೆ ಡಿಪೋದ ಹತ್ತಿರ ಬರುತ್ತದೆ. ಸರ್ವೆ ನಂ.72 ರ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ನಿಪಿ-02 ರ ಸ್ವಾಧೀನ ಪತ್ರದಲ್ಲಿ ಸೌಭಾಗ್ಯಮ್ಮರವರ ಸಂಪೂರ್ಣ ಹೆಸರು ವಿಳಾಸವಿಲ್ಲ ಎಂದರೆ ಸರಿ. ನಿಪಿ-02 ರಲ್ಲಿ ದಿನಾಂಕಃ03.12.1992 ಮತ್ತು 10.06.1993 ರ ತೀರ್ಮಾನದಂತೆ ನಿವೇಶನ ಮಂಜೂರು ಮಾಡಲಾಗಿದೆ ಎಂದು ನಮೂದಿಸಿದೆ ಎಂದರೆ ಸರಿ. ಸದರಿ ಆದೇಶದ ಪ್ರತಿಗಳನ್ನು ನಾನು ಪರಿಶೀಲಿಸಿರುತ್ತೇನೆ. ನಿಪಿ-03 ರಲ್ಲಿ ಹಣ ಪಾವತಿ ಮಾಡಿದ

ವಿವರದಲ್ಲಿ ಚಿತ್ತು ಕಾಟು ಮಾಡಲಾಗಿದ್ದು, ಅದಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ. ನಿಪಿ-03 ರಲ್ಲಿ ಸರ್ವೆ ನಂ.72 ರ ನಿವೇಶನವೆಂದು ಮಾತ್ರ ನಮೂದಿಸಿದ್ದು, ಸೌಭಾಗ್ಯಮ್ಮರವರ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿ. ನಿಪಿ-07 ಮತ್ತು 08 ರಲ್ಲಿ ದಾವಾಸ್ವತ್ತು ಸೌದೇ ಡಿಪೋ ಎಂದು ನಮೂದಿಸಿದ್ದು, ವಿಜಯನಗರ ಎಕ್ಸ್‌ಟೆಂಷನ್ ಎಂದು ಅವುಗಳಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಿಪಿ-01 ರಿಂದ 08 ರ ದಾಖಲೆಗಳಲ್ಲಿ ನಮ್ಮ ಸ್ವತ್ತು ವಿಜಯನಗರ ಎಕ್ಸ್‌ಟೆಂಷನ್ ಎಂದು ಎಲ್ಲೂ ನಮೂದಿಸಿಲ್ಲ ಎಂದರೆ ಸಾಕ್ಷಿ ಮೊದಲು ಸೌದೇ ಡಿಪೋ ಎಂದು ಇದ್ದು, ಈಗ ವಿಜಯನಗರ ಎಕ್ಸ್‌ಟೆಂಷನ್ ಆಗಿದೆ ಎನ್ನುತ್ತಾರೆ. ದಾವಾಸ್ವತ್ತಿನ ಹತ್ತಿರ ಮೊದಲು ಸೌದೇ ಡಿಪೋ ಎಂದು ಇದ್ದು, ಈಗ ವಿಜಯನಗರ ಎಕ್ಸ್‌ಟೆಂಷನ್ ಆಗಿದೆ ಎಂದು ತೋರಿಸಲು ನಾನು ಯಾವುದೇ ದಾಖಲು ಹಾಜರುಪಡಿಸಿಲ್ಲ ಎಂದರೆ ಸರಿ. ಈ ದಾವೆಯನ್ನು ಕೆ.ಆರ್.ನಗರದ ಕಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ದಾಖಲು ಮಾಡುವಾಗಲೇ ಸೌದೇ ಡಿಪೋ ಎಂದು ಇರುವುದು ವಿಜಯನಗರ ಎಕ್ಸ್‌ಟೆಂಷನ್ ಆಗಿದೆ ಎಂದು ಗೊತ್ತಿತ್ತು. ದಾವೆ ಸಲ್ಲಿಸುವಾಗ ನಾನು ಸಲ್ಲಿಸಿದ ದಾಖಲೆಗಳನ್ನು ತಿದ್ದುಪಡಿ ಮಾಡಿಸಿ ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸರಿ.

3) ದಾವಾಸ್ವತ್ತನ್ನು ಕೊಂಡಾಗಿನಿಂದ ಇಲ್ಲಿಯವರೆಗೆ ಕೆ.ಆರ್.ನಗರದಲ್ಲಿ ವಿಜಯನಗರ ಎಕ್ಸ್‌ಟೆಂಷನ್, ಬನ್ನಿಮಂಟಪ ಬಡಾವಣೆ ಮತ್ತು ಸೌದೇ ಡಿಪೋ ಎಲ್ಲಿ ಬರುತ್ತದೆ ಎಂದು ಪರಿಶೀಲನೆ ಮಾಡಿರುವುದಿಲ್ಲ. ನ್ಯಾಯಾಲಯದ ಕಟ್ಟಡ, ತಹಶೀಲ್ದಾರ್ ಕಚೇರಿ, ಸಾರ್ವಜನಿಕ ಆಸ್ಪತ್ರೆ ಮತ್ತು ತಾಲ್ಲೂಕು ಪಂಚಾಯಿತಿ ಕಚೇರಿಯ ಪಶ್ಚಿಮ ದಿಕ್ಕಿಗೆ ವಿಜಯನಗರ ಎಕ್ಸ್‌ಟೆಂಷನ್ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಕೆ.ಆರ್.ನಗರ ಟೌನ್‌ನ ಸಂಪೂರ್ಣ ಪರಿಚಯ ಇಲ್ಲ.

4) ಈ ದಾವೆಯಲ್ಲಿ ಕಟ್ಟಿರುವಂತಹ ಮನೆಯನ್ನು ಕೆಡುವಬೇಕೆಂದು ಪರಿಹಾರ ಕೋರಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ತಾವು ಹಾಜರುಪಡಿಸಿದ ಫೋಟೋಗಳನ್ನು ತೋರಿಸಿ ಇವುಗಳಲ್ಲಿ ಯಾವ ಮನೆಯನ್ನು ಕೆಡುವಬೇಕೆಂದು ಕೇಳಿರುತ್ತೀರಿ ಎಂದರೆ ಸಾಕ್ಷಿ ನಿಪಿ-13 ರಲ್ಲಿರುವ ಬೂದು ಮಿಶ್ರಿತ ಕೇಸರಿ ಬಣ್ಣವಿರುವ ಮನೆಯನ್ನು ಕೆಡುವಬೇಕೆಂದು ಹೇಳುತ್ತಾರೆ. ದಾವಾಸ್ವತ್ತಿನ ವಿವರಣೆಯಲ್ಲಿ ದಾವಾಸ್ವತ್ತಿನಲ್ಲಿರುವ

ಮನೆಯ ವಿಸ್ತೀರ್ಣವನ್ನು ನಿಖರವಾಗಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿರುವ ಮನೆಯ ಸಂಪೂರ್ಣ ವಿವರಣೆಯನ್ನು ತಿಳಿಸಲು ನಮಗೇನು ತೊಂದರೆ ಇರಲಿಲ್ಲ ಎಂದರೆ, ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸೌಭಾಗ್ಯಮ್ಮರವರಿಂದ ಕೊಂಡಿರುವ ಕ್ರಯಪತ್ರದಲ್ಲಿ ಸ್ವತ್ತು ಅವರಿಗೆ ಹೇಗೆ ಬಂದಿರುತ್ತದೆ ಎಂದು ನಮೂದು ಮಾಡದೇ ಇರುವುದರಿಂದ, ನಿಪಿ-01 ಮತ್ತು 2 ಕ್ಕೂ ಮತ್ತು ದಾವಾಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ-02 ರಲ್ಲಿ ಸೌಭಾಗ್ಯಮ್ಮರವರ ಸಂಪೂರ್ಣ ಹೆಸರು ವಿಳಾಸ ನಮೂದು ಮಾಡದೇ ಇರುವುದರಿಂದ, ನಿಪಿ-01 ರಲ್ಲಿ ಸೌಭಾಗ್ಯಮ್ಮರವರು ಈ ಸ್ವತ್ತನ್ನು ಹೊಂದಿರುವ ಬಗ್ಗೆ ಹಾಗೂ ದಾವಾಸ್ವತ್ತನ್ನು ಮಂಜೂರು ಮಾಡಿರುವ ಬಗ್ಗೆ ಯಾವುದೇ ಮಾಹಿತಿಯನ್ನು ನಮೂದು ಮಾಡದೇ ಇರುವುದರಿಂದ ನಿಪಿ-01 ಮತ್ತು 02 ಕ್ಕೆ ಯಾವುದೇ ರೀತಿಯ ಕಾನೂನಾತ್ಮಕ (ರಿಲವೆನ್ಸಿ) ಇರುವುದಿಲ್ಲ ಎಂದರೆ ಸಾಕ್ಷಿ ಸೌಭಾಗ್ಯಮ್ಮರವರಿಗೆ ಪುರಸಭೆಯಿಂದ ಹಕ್ಕುಪತ್ರ ನೀಡಿರುತ್ತಾರೆ ಎನ್ನುತ್ತಾರೆ. ದಾವಾಪತ್ರದಲ್ಲಿ ಪ್ರತಿವಾದಿಗೆ ದಾವಾಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಅಧಿಕಾರ ಮತ್ತು ಹಿತಾಸಕ್ತಿ ಇರುವುದಿಲ್ಲವೆಂದು ನಮೂದಿಸಿದ್ದು ಈ ಕುರಿತು ನಾನು ಯಾವುದೇ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ.

5) ನವೆಂಬರ್ 2013 ರಲ್ಲಿ ದಾವಾಸ್ವತ್ತನ್ನು ಬಲತ್ಕಾರವಾಗಿ ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದು ಹೇಳಿದ್ದು ನಿಖರವಾಗಿ ದಿನಾಂಕವನ್ನು ಹೇಳಲು ಬರುವುದಿಲ್ಲ. ದಾವಾಪತ್ರದಲ್ಲಿರುವ ಸ್ವತ್ತನ್ನು ಬಲತ್ಕಾರವಾಗಿ ಸ್ವಾಧೀನಪಡಿಸಿಕೊಂಡಿದ್ದರೂ ನವೆಂಬರ್ 2013 ರಲ್ಲಿ ದಾವಾಸ್ವತ್ತನ್ನು ಬಲತ್ಕಾರವಾಗಿ ಸ್ವಾಧೀನ ಪಡಿಸಿಕೊಂಡ ತಕ್ಷಣ ಕಾನೂನು ಕ್ರಮ ಜರುಗಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಾನು ದೂರದಲ್ಲಿ ವಾಸವಾಗಿದ್ದರಿಂದ ಬರುವುದು ತಡವಾಗಿತ್ತು ಎನ್ನುತ್ತಾರೆ. ದಿನಾಂಕಃ12.11.2014 ರಂದು ನಾನು ದಾವಾಸ್ವತ್ತಿನ ಹತ್ತಿರ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದು, ವ್ಯಾಜ್ಯ ಕಾರಣಕ್ಕಾಗಿ ಈ ದಿನಾಂಕವನ್ನು ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಅಕ್ರಮವಾಗಿ ಮತ್ತು ಕಾನೂನು ಬಾಹಿರವಾಗಿ ಮನೆಯನ್ನು ಕಟ್ಟಿರುತ್ತಾರೆ ಎನ್ನುವುದು ನ್ಯಾಯಾಲಯದ ಮುಂದೆ ನಾನು ಮಾಡುವ ಆರೋಪ ಎಂದರೆ ಸರಿ. ಈ ಆರೋಪ ಮಾಡುವ ಮುನ್ನ ಪ್ರತಿವಾದಿ ಕಟ್ಟಡ

ನಿರ್ಮಾಣದ ಪರವಾನಗಿ, ಅಂಗೀಕೃತ ನಕ್ಷೆ ಹಾಗೂ ಇತರೆ ದಾಖಲೆಗಳನ್ನು ಪಡೆದಿರುತ್ತಾರೋ ಇಲ್ಲವೋ ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ. ಪ್ರತಿವಾದಿ ಅಕ್ರಮವಾಗಿ ಮನೆ ಕಟ್ಟಿರುತ್ತಾರೆ ಎಂದು ಜಿಲ್ಲಾಧಿಕಾರಿಗಳು ಮೈಸೂರು ರವರಿಗೆ ದೂರು ಸಲ್ಲಿಸಿರುತ್ತೇವೆ ಆದರೆ ಹಿಂಬರಹ ಪಡೆದಿರುವುದಿಲ್ಲ. ದಾವಾ ಸಲ್ಲಿಸುವ ಮುನ್ನ ಪ್ರತಿವಾದಿ ಯಾವ ಆಸ್ತಿ ನಂಬರಿನಲ್ಲಿ ಮನೆ ಕಟ್ಟಿಸಿರುತ್ತಾರೆ ಎಂದು ಪರಿಶೀಲನೆ ಮಾಡಿರುತ್ತೇನೆ. ಅವರು ನಿವೇಶನ ಸಂಖ್ಯೆ:126 ರ ಅರ್ಧಭಾಗದಲ್ಲಿ ಕಟ್ಟಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ. ಇನ್ನು ಅರ್ಧಭಾಗ ಹಾಗೇ ಇದೆ. ನನ್ನ ದಾವಾಪತ್ರದಲ್ಲಿ ಈ ವಿಷಯವನ್ನು ಹೇಳಿಲ್ಲ ಎಂದರೆ ಸರಿ.

6) ಪ್ರತಿವಾದಿ ಸೈಟ್ ನಂ.16 ಮತ್ತು ಮುನಿಸಿಪಾಲ್ ಅಸೆಸ್‌ಮೆಂಟ್ ನಂ.7784 ಎ ರಲ್ಲಿ ಮನೆ ಕಟ್ಟಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನಮ್ಮ ನಿವೇಶನ ಸಂಖ್ಯೆ: 126 ರಲ್ಲಿ ಕಟ್ಟಿರುತ್ತಾರೆ ಎನ್ನುತ್ತಾರೆ. ಸೈಟ್ ನಂ.16 ಮತ್ತು ಮುನಿಸಿಪಾಲ್ ಅಸೆಸ್‌ಮೆಂಟ್ ನಂ.7784 ಎ ರಲ್ಲಿನ ಮನೆಗೂ ಆಸ್ತಿಗೂ ನನಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ ಮತ್ತು ಸಂಬಂಧ ಇಲ್ಲ ಎಂದರೆ ಸರಿ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.